

S.D.J. ಗೋಲ್ಡ್ ಕಂಪನಿ

ನೀವು ಗಿರಿವಿಯಿಟ್ಟು ಬಿಡಿಸಿಕೊಳ್ಳಲಾಗದ ಚಿನ್ನದ ಆಭರಣಗಳನ್ನು ಬಿಡಿಸಿ ಮಾರುಕಟ್ಟೆಗಿಂತ ಅಧಿಕ ಬೆಲೆಗೆ ತೆಗೆದುಕೊಂಡು ಉಳಿದ ಹಣವನ್ನು ತಕ್ಷಣ ಕೊಡುತ್ತೇವೆ. ಮತ್ತು ನಮ್ಮ S.D.J.ಗೋಲ್ಡ್ ಕಂಪನಿಗೆ ಕೆಲಸವಮಾಡಲು ವ್ಯಕ್ತಿಗಳು ಬೇಕಾಗಿದ್ದಾರೆ. ಸಂಬಳ: 15000.

ಮೊ: 9148718586

ಆಂದೋಲನ

ದಿನಪತ್ರಿಕೆ

ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

TATA MOTORS

ಹೊಸ ಟಾಟಾ ಮ್ಯಾಜಿಕ್ ಎಕ್ಸ್‌ಪ್ರೆಸ್

8 ಆಸನಗಳ ಬಹುಉಪಯೋಗಿ ವಾಹನ ಸಂಪೂರ್ಣ ಸ್ಟೀಲ್ ಬಾಡಿಯೊಂದಿಗೆ

ಬುಕ್ಕಿಂಗ್‌ಗಾಗಿ ಸಂಪರ್ಕಿಸಿ

ಪ್ರೇರಣಾ ಮೋಟಾರ್ಸ್ 9663368536

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿಗೆ ಇಂದು ಬೆಳಿಗ್ಗೆ ೧೧.೩೫ಕ್ಕೆ ವಿಮಾನದಲ್ಲಿ ಆಗಮಿಸುತ್ತಿದ್ದು, ನಗರದಲ್ಲಿ ಪುತ್ಥಳಿ ಅನಾವರಣ, ಪಿಯು ಕಾಲೇಜು ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ಮತ್ತು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮೈಸೂರಿನಲ್ಲಿ ಸಿಎಂ ಮೂರು ಕಾರ್ಯಕ್ರಮ

ಮೈಸೂರು ಕೊಳವೆ ಬಾವಿ ಲಾಬಿ!

ಮೈಸೂರು ಜಿಲ್ಲೆಯಾದ್ಯಂತ ೬ ತಿಂಗಳಲ್ಲಿ ೨೦ ಸಾವಿರಕ್ಕೂ ಹೆಚ್ಚು ಕೊಳವೆಬಾವಿ ಕೊರೆಯಲಾಗಿದ್ದು ಇದನ್ನೇ ರಿಗ್ ಮಾಲೀಕರು ದೊಡ್ಡ ಲಾಬಿಯಾಗಿಸಿಕೊಂಡಿದ್ದಾರೆ ಎಂದಿದ್ದಾರೆ ಜಿಪಂ ಸಿಇಒ ಪಿ.ಶಿವಶಂಕರ್.

ಗರಿಷ್ಠ: ೨೮° । ಕನಿಷ್ಠ: ೧೮°

ಮೋಡಕವಿದ ವಾತಾವರಣ ತುಂತುರು ಮಳೆ ಸಾಧ್ಯತೆ

ಸಂಪುಟ: ೪೬ ಸಂಚಿಕೆ: ೩೨೮, ರಾಷ್ಟ್ರೀಯ ಶಕ ೧೯೩೯ ಹೇಮಂತ-ಮಾರ್ಗಶಿರ ೧೭, ● ಷಷ್ಠಿ- ಆಶ್ಲೇಷಾ, ಶುಕ್ರವಾರ, ಡಿ.೮, ೨೦೧೭, ದೂರವಾಣಿ: ೨೪೪೯೫೩೧, ೨೪೪೯೫೩೪, ೨೪೪೯೫೩೫, ಫ್ಯಾಕ್ಸ್: ೨೪೪೯೫೩೬, ಪುಟ: ೧೨+೪, ರೂ. ೩

ಜೈಲಿನಿಂದಲೇ ಬೆದರಿಕೆ!

■ ಮಂಡ್ಯ ಉದ್ಯಮಿಗೆ ಮೈಸೂರು ಜೈಲಿನಿಂದ ಬೆದರಿಕೆ ಕರೆ
■ ಜೈಲಿನ ಬ್ಯಾರಕ್‌ನಲ್ಲಿ ಗಾಂಜಾ, ಮೊಬೈಲ್ ಫೋನ್ ಪತ್ತೆ!

ಮೈಸೂರು,ಡಿ.೭- ಕಾರಾಗೃಹದಲ್ಲಿನ ಭದ್ರತೆಗೆ ಸಂಬಂಧಿಸಿದಂತೆ ಎಲ್ಲವೂ ಸರಿಯಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಸಜಾ ಕೈದಿಯೊಬ್ಬ ಮೈಸೂರು ಜೈಲಿನಲ್ಲಿದ್ದುಕೊಂಡೇ ಮಂಡ್ಯದ ಉದ್ಯಮಿಯೊಬ್ಬರನ್ನು ದೂರವಾಣಿ ಮೂಲಕ ಬೆದರಿಸಿ ೨೦ ಲಕ್ಷ ರೂ. ಹಣಕ್ಕೆ ಬೇಡಿಕೆಯಿಟ್ಟ ಆತಂಕಕಾರಿ ಘಟನೆ ವರದಿಯಾಗಿದೆ.

ಇದೇ ವೇಳೆ ನಗರದ ಕೇಂದ್ರ ಕಾರಾಗೃಹದ ಮೇಲೆ ಬುಧವಾರ ರಾತ್ರಿ ದಾಳಿ ನಡೆಸಿದ ಪೊಲೀಸರಿಗೆ ಸಜಾ ಕೈದಿಯನ್ನು ಇಡಲಾಗಿದ್ದ ಬ್ಯಾರಕ್‌ನಲ್ಲಿ ಗಾಂಜಾ ಮತ್ತು ಮೊಬೈಲ್ ಫೋನ್ ಹಾಗೂ ಹಲವು ಕಂಪನಿಗಳ ಸಿಮ್‌ಕಾರ್ಡ್‌ಗಳೂ ದೊರೆತಿವೆ. ಇದು ದಾಳಿ ನಡೆಸಿದ ಪೊಲೀಸರನ್ನೇ ದಂಗಾಗಿಸಿದೆ.

- ● ೨೦ ಲಕ್ಷ ರೂ. ಹಣ ನೀಡಲೇಬೇಕೆಂದು ಒತ್ತಾಯ
- ● ಮಂಡ್ಯ ಡಿವೈಎಸ್‌ಪಿಗೆ ಉದ್ಯಮಿ ದೂರು
- ● ಮೊಬೈಲ್ ಕರೆ ಜಾಡು ಹಿಡಿದು ಹೊರಟ ಪೊಲೀಸರು ಕೊನೆಗೆ ಮುಟ್ಟಿದ್ದು ಮೈಸೂರು ಕಾರಾಗೃಹ!
- ● ಸಜಾ ಕೈದಿ ಬಸವ ವಿರುದ್ಧ ಪ್ರಕರಣ ದಾಖಲು

ನಡೆದದ್ದಾದರೂ ಏನು?: ಮೈಸೂರು ಕೇಂದ್ರ ಕಾರಾಗೃಹದಲ್ಲಿ ಸಜಾ ಕೈದಿಯಾಗಿರುವ ಬಸವರಾಜ್ ಅಲಿಯಾಸ್ ಬಸವ ಎಂಬಾತ ಮೊಬೈಲ್ ಮೂಲಕ ಮಂಡ್ಯದ ಉದ್ಯಮಿಯೊಬ್ಬರಿಗೆ ಕರೆ ಮಾಡಿ ೨೦ ಲಕ್ಷ ರೂ. ಹಣ ನೀಡುವಂತೆ ಬೇಡಿಕೆ ಇಟ್ಟಿದ್ದಾನೆ. ಕೊಡದಿದ್ದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂಬ ಬೆದರಿಕೆಯನ್ನೂ ಹಾಕಿದ್ದಾನೆ.

ಇದರಿಂದ ಆತಂಕಗೊಂಡ ಉದ್ಯಮಿ, ಮಂಡ್ಯದ ಡಿವೈಎಸ್‌ಪಿ ಚಂದ್ರಶೇಖರ್ ಅವರಿಗೆ ದೂರು ನೀಡಿದ್ದಾರೆ. ದೂರು ದಾಖಲಿಸಿಕೊಂಡ ಪೊಲೀಸರು ಮೊಬೈಲ್ ಫೋನ್ ಕರೆಯ ಜಾಡು ಹಿಡಿದು ಹೊರಟಾಗ ಅದು ಸೀದಾ ಮೈಸೂರು ಕಾರಾಗೃಹಕ್ಕೆ ಕರೆದುಕೊಂಡು ಬಂದು ನಿಲ್ಲಿಸಿದೆ. ನಂತರ ಡಿವೈಎಸ್‌ಪಿ ಚಂದ್ರಶೇಖರ್ ಅವರು ಕೇಂದ್ರ ಕಾರಾಗೃಹದ ಅಧಿಕಾರಿ ಪಿ.ವಿ.ಆನಂದರೆಡ್ಡಿ ಅವರಿಗೆ ಬೆದರಿಕೆ ಕರೆಯ ವಿಚಾರ ತಿಳಿಸಿದ್ದಾರೆ.

ಬಳಿಕ ಮಂಡ್ಯ ಡಿವೈಎಸ್‌ಪಿ ನೇತೃತ್ವದ ತಂಡ ಹಾಗೂ ಮೈಸೂರು ಸಿಸಿಬಿ ಪೊಲೀಸರು ಮಂಡಿ ಪೊಲೀಸ್ ಠಾಣೆ ಸಿಬ್ಬಂದಿ ನೆರವಿನೊಂದಿಗೆ ಬುಧವಾರ ರಾತ್ರಿ ೭ ಗಂಟೆ ವೇಳೆಗೆ ಕಾರಾಗೃಹದಲ್ಲಿ ತಪಾಸಣೆ ಆರಂಭಿಸಿದ್ದಾರೆ. ಕೈದಿ ಬಸವರಾಜುವನ್ನು ಇಟ್ಟಿರುವ ಬ್ಯಾರಕ್ ಪರಿಶೀಲಿಸಿದಾಗ ಪೊಲೀಸರೇ ಆಶ್ಚರ್ಯಚಕಿತರಾಗಿದ್ದಾರೆ.

ಸುಧಾರಣೆ ಕಾಣದ ಜೈಲು ವ್ಯವಸ್ಥೆ

ರಾಜ್ಯದ ಅನೇಕ ಜಿಲ್ಲೆಗಳಲ್ಲಿರುವ ಕಾರಾಗೃಹಗಳಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತವೆ ಎಂಬುದು ಮೊದಲಿನಿಂದಲೂ ತಿಳಿದ ವಿಚಾರ. ಈ ಹಿಂದೆ ಕಾರಾಗೃಹ ಇಲಾಖೆ ಡಿಐಜಿ ಆಗಿದ್ದ ರೂಪಾ ಅವರು, ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದಂತೆ ರಾಜ್ಯದ ವಿವಿಧೆಡೆಯ ಜೈಲುಗಳಲ್ಲಿ ನಡೆಯುವ ಅಕ್ರಮಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದರು. ಇದು ಸಾಕಷ್ಟು ವಿವಾದಕ್ಕೂ ಕಾರಣವಾಗಿತ್ತು.

ಅಂದು ಸರ್ಕಾರ ಕಾರಾಗೃಹ ಇಲಾಖೆಗೆ ಕಾಯಕಲ್ಪ ನೀಡಲು ಮುಂದಾಗಿತ್ತು. ಅಲ್ಲಿನ ಭದ್ರತೆಯ ಲೋಪಗಳನ್ನು ಸರಿಪಡಿಸಲು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕೆಲ ಮಹತ್ವದ ತೀರ್ಮಾನ ತೆಗೆದುಕೊಂಡಿದ್ದರು. ಹೀಗಾಗಿ ಜೈಲಿನ ಆವರಣದಲ್ಲಿ ಅಕ್ರಮಗಳಿಗೆ ಕಡಿವಾಣ ಹಾಕಲಾಗುತ್ತದೆ ಎಂದೇ ಭಾವಿಸಲಾಗಿತ್ತು.

ಆದರೆ ಈಗ ರಾಜ್ಯದ ಜೈಲುಗಳ ಆವರಣ ಕೈದಿಗಳಿಗೆ ಸ್ವರ್ಗ ಸಮಾನ ಎಂಬಂತಾಗಿರುವುದು ಮತ್ತೊಮ್ಮೆ ಸಾಬೀತಾಗಿದೆ.

ಮುದ್ದೆ, ಅನ್ನದಲ್ಲಿ ಸಿಮ್, ಗಾಂಜಾ!

ಮೈಸೂರು ಕೇಂದ್ರ ಕಾರಾಗೃಹದೊಳಗೆ ಗಾಂಜಾ, ಮೊಬೈಲ್ ಫೋನ್ ಮತ್ತು ಇಷ್ಟೊಂದು ಸಿಮ್ ಕಾರ್ಡ್‌ಗಳು ಹೇಗೆ ಬಂದವು?

ಕೈದಿಗಳ ಬಂಧುಗಳು ಹೊರಗಿಂದ ತಂದುಕೊಡುವ ಆಹಾರಗಳ ಮೂಲಕವೇ ಇಂಥವೆಲ್ಲಾ ಜೈಲಿನೊಳಗೆ ಸೇರುತ್ತವೆ. ರಾಗಿ ಮುದ್ದೆ, ಅನ್ನದ ನಡುವೆ ಮೊಬೈಲ್, ಸಿಮ್, ಗಾಂಜಾವನ್ನು ಅಡಗಿಸಿಟ್ಟು ಪೂರೈಸಲಾಗುತ್ತದೆ...

ಇದು ಹೆಸರು ಹೇಳಲಿಚ್ಛಿಸದ ಪೊಲೀಸ್ ಅಧಿಕಾರಿಯೊಬ್ಬರು ಹೇಳುವ ಮಾತು.

ವಿಚಾರಣಾಧೀನ ಕೈದಿಗಳಿಗೆ ಹಾಗೂ ಕೆಲವೊಮ್ಮೆ ಸಜಾ ಕೈದಿಗಳಿಗೆ ಅವರ ಸಂಬಂಧಿಗಳು ಹಾಗೂ ಸ್ನೇಹಿತರು ಊಟ, ತಿಂಡಿ ತಂದುಕೊಡುವುದು ವಾಡಿಕೆ. ಅಂತಹ ವೇಳೆ ಜೈಲಿನ ಸಿಬ್ಬಂದಿ ಕೂಲಂಕಷವಾಗಿ ಪರಿಶೀಲನೆ ನಡೆಸಬೇಕು.

⏭ ೧೦

ಮೊದಲಿಗೆ ಅಲ್ಲಿ ಒಂದು ನೋಕಿಯಾ ಮೊಬೈಲ್ ಫೋನ್, ೩ ಸಿಮ್‌ಗಳು ದೊರಕಿವೆ. ನಂತರ ತಪಾಸಣೆ ಮುಂದುವರೆಸಿದ ಪೊಲೀಸರಿಗೆ ಬಸವರಾಜುವಿನ ಹಾಸಿಗೆ ಕೆಳಗೆ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ನಲ್ಲಿ ಅಡಗಿಸಿಟ್ಟಿದ್ದ ೧೩೫ ಗ್ರಾಂ ಗಾಂಜಾ ಸಿಕ್ಕಿದೆ. ೩೦ ಚಿಕ್ಕ ಚಿಕ್ಕ ಪ್ಲಾಸ್ಟಿಕ್ ಪ್ಯಾಕೆಟ್‌ಗಳಲ್ಲಿ ಗಾಂಜಾವನ್ನು ವಿಂಗಡಿಸಿ ಇಡಲಾಗಿತ್ತು.

ಇದೇ ವೇಳೆ ಆತನ ಸಹಚರ ಎನ್ನಲಾದ ಸಂಖ್ಯೆ ೭ರ ಬ್ಯಾರಕ್‌ನಲ್ಲಿದ್ದ ಕುಮಾರ ಅಲಿಯಾಸ್ ಮಡಿಕೆ ಕುಮಾರನನ್ನು ಇರಿಸಿದ್ದ ಜಾಗದಲ್ಲಿಯೂ ಪರಿಶೀಲನೆ ನಡೆಸಿದಾಗ ಅಲ್ಲಿ ೧ ಜೆನ್ ಕಂಪನಿಯ ಮೊಬೈಲ್ ಫೋನ್, ೨ ಸ್ಯಾಮ್ ಸಂಗ್ ಮೊಬೈಲ್ ಫೋನ್‌ಗಳು ಸಿಕ್ಕಿವೆ. ಜತೆಗೆ ವಿವಿಧ ಕಂಪನಿಗಳ ಸಿಮ್‌ಗಳೂ ದೊರಕಿವೆ.

⏭ ೧೦

ಕುಕ್ಕರಹಳ್ಳಿ ಕೆರೆ: ಪೆಲಿಕನ್ ಸಾವು

ಹಕ್ಕಿ ಜ್ವರ ವದಂತಿ ಅಲ್ಲಗಳೆದ ಪಶುಪಾಲನಾ ಇಲಾಖೆ

ಮೈಸೂರು,ಡಿ.೭- ಪೆಲಿಕನ್ ಪಕ್ಷಿಯೊಂದು ಅನಾರೋಗ್ಯಕ್ಕೀಡಾಗಿರುವುದು ಬುಧವಾರ ಪತ್ತೆಯಾದ ಬೆನ್ನಲ್ಲೇ, ಮತ್ತೊಂದು ಪೆಲಿಕನ್ ಪಕ್ಷಿಯ ಮೃತದೇಹ ಕೊಳೆತ ಸ್ಥಿತಿಯಲ್ಲಿ ಗುರುವಾರ ಬೆಳಿಗ್ಗೆ ಪತ್ತೆಯಾಗಿದೆ. ಇದು ಪಕ್ಷಿ ಪ್ರಿಯರ ಆತಂಕಕ್ಕೆ ಕಾರಣವಾಗಿದೆ.

ಹೆಚ್ಚು ನೀರಿರುವ ಪ್ರದೇಶಗಳಲ್ಲಿ ಮಾತ್ರವೇ ಕಂಡು ಬರುವ ಪೆಲಿಕನ್ ಪಕ್ಷಿಗಳು ಕುಕ್ಕರಹಳ್ಳಿ ಕೆರೆಯಲ್ಲಿ ತಾತ್ಕಾಲಿಕ ನೆಲೆ ಕಂಡುಕೊಂಡಿದ್ದವು. ಬುಧವಾರ ಬೆಳಿಗ್ಗೆ ವಾಯುವಿಹಾರಕ್ಕೆಂದು ತೆರಳಿದ್ದ ಜನರಿಗೆ ಕೆರೆಯಲ್ಲಿ ಅಸ್ವಸ್ಥ ಪಕ್ಷಿಯೊಂದು ತೇಲುತ್ತಿರುವುದು ಕಂಡಿತ್ತು. ಕೂಡಲೇ ಅವರು ಅರಣ್ಯಾಧಿಕಾರಿಗೆ ಹಾಗೂ ಕುಕ್ಕರಹಳ್ಳಿ ಕೆರೆ ಸಂರಕ್ಷಣಾ ಸಮಿತಿ ಸದಸ್ಯರಿಗೆ ಸುದ್ದಿ ಮುಟ್ಟಿಸಿದ್ದರು.

ಸಮಿತಿ ಸಂಚಾಲಕ ಕೆ.ಎಂ.ಜಯರಾಮಯ್ಯ ಅವರು ತಕ್ಷಣವೇ ಪಶುಪಾಲನಾ ವೈದ್ಯರನ್ನು ಸ್ಥಳಕ್ಕೆ ಕಳುಹಿಸಿದ್ದರು. ನಂತರ ಪಕ್ಷಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ 'ಪೀಪಲ್ ಫಾರ್ ಅನಿಮಲ್' ಸಂಸ್ಥೆಯ ವಶಕ್ಕೆ ನೀಡಲಾಗಿತ್ತು. ಇದೀಗ ಆ ಪಕ್ಷಿ ಚೇತರಿಸಿಕೊಳ್ಳುತ್ತಿದೆ.

ಆದರೆ, ಗುರುವಾರ ಬೆಳಿಗ್ಗೆ ಕೆರೆಯ ಅಂಗಳದಲ್ಲಿ ಮತ್ತೊಂದು ಪೆಲಿಕನ್‌ನ ಮೃತದೇಹ ಕಂಡುಬಂದಿದೆ. ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಆಗಮಿಸಿದ ಪಶುವೈದ್ಯಾಧಿಕಾರಿ ಪ್ರಸಾದಮೂರ್ತಿ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ, ಕೊಳೆತ ಸ್ಥಿತಿಯಲ್ಲಿದ್ದ ಪಕ್ಷಿಯ ಕಳೇಬರವನ್ನು ಪರೀಕ್ಷೆಗಾಗಿ ಬೆಂಗಳೂರಿನ ಪ್ರಯೋಗಾಲಯಕ್ಕೆ ರವಾನಿಸಿದ್ದಾರೆ.

ಈ ಸಂಬಂಧ ಪಶುಪಾಲನಾ ಇಲಾಖೆ ಉಪ ನಿರ್ದೇಶಕ ಡಾ.ಪ್ರಸಾದ್ ಮೂರ್ತಿ ಅವರು ಸುದ್ದಿಗಾರರ ಜತೆ ಮಾತನಾಡಿ, ಪಕ್ಷಿಯ ಕಳೇಬರವನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಪ್ರಾಣಿಗಳು ಮೃತಪಟ್ಟಲ್ಲಿ ಸಾವಿಗೆ ಕಾರಣಗಳನ್ನು ತಕ್ಷಣ ಊಹಿಸಬಹುದು. ಪಕ್ಷಿಗಳು ಸಾವಿಗೀಡಾದರೆ ಅದಕ್ಕೇನು ಕಾರಣ ಎಂಬುದನ್ನು ಪ್ರಯೋಗಾಲಯದ ಮೂಲಕವೇ ಕಂಡುಕೊಳ್ಳಬೇಕು ಎಂದರು.

⏭ ೧೦

- ● ಕುಕ್ಕರಹಳ್ಳಿ ಕೆರೆಯಲ್ಲಿ ಬುಧವಾರ ಅಸ್ವಸ್ಥ ಪೆಲಿಕನ್ ಕಂಡ ವಾಯುವಿಹಾರಿ ಗಳು
- ● ಪಶುಪಾಲನಾ ವೈದ್ಯರಿಂದ ಚಿಕಿತ್ಸೆ; ಒಂದೇ ದಿನದಲ್ಲಿ ಪಕ್ಷಿ ಚೇತರಿಕೆ
- ● ಬೇರೊಂದು ಪೆಲಿಕನ್ ಶವ ಗುರುವಾರ ಬೆಳಗ್ಗೆ ಕೊಳೆತ ಸ್ಥಿತಿಯಲ್ಲಿ ಪತ್ತೆ
- ● ಕಲುಷಿತ ನೀರು ಸೇರುತ್ತಿಲ್ಲ: ಅಧಿಕಾರಿಗಳ ಸ್ಪಷ್ಟನೆ

ರಾಜ್ಯದಿಂದಲೇ ರಾಹುಲ್ ಪ್ರವಾಸ

ಮೈಸೂರು,ಡಿ.೭- ಎಐಸಿಸಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ರಾಹುಲ್ ಗಾಂಧಿ ಅವರು ಕರ್ನಾಟಕದಿಂದಲೇ ಪ್ರವಾಸ ಆರಂಭಿಸಲು ನಿರ್ಧರಿಸಿದ್ದು, ಅದಕ್ಕಾಗಿ ರಾಜ್ಯ ಕಾಂಗ್ರೆಸ್ ನಾಯಕರು ನೂತನ ಸಾರಥಿಯನ್ನು ಅದ್ದೂರಿಯಾಗಿ ಸ್ವಾಗತಿಸಲು ಸಿದ್ಧರಾಗಬೇಕು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ತಿಳಿಸಿದ್ದಾರೆ.

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ರಾಜ್ಯ ಉಸ್ತುವಾರಿಯೂ ಆಗಿರುವ ಕೆ.ಸಿ.ವೇಣುಗೋಪಾಲ್ ಅವರ ಅಧ್ಯಕ್ಷತೆಯಲ್ಲಿ ಪಕ್ಷದ ವಿಭಾಗವಾರು ಮುಖಂಡರ ಸಭೆ ನಡೆಯುತ್ತಿದೆ. ಇದರ ಭಾಗವಾಗಿ ಬುಧವಾರ ನಡೆದ ಮೈಸೂರು ವಿಭಾಗ ಮಟ್ಟದ ಸಭೆಯಲ್ಲಿ ಅವರು ಈ ಸೂಚನೆ ನೀಡಿದರು.

ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆ ಮೇಲೆ ಕಣ್ಣಿಟ್ಟಿರುವ ರಾಹುಲ್ ಗಾಂಧಿ ಅವರು ಮರಳಿ ಕಾಂಗ್ರೆಸ್ ಪಕ್ಷವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರಲು ಮುಂದಾಗಿದ್ದಾರೆ.

⏭ ೧೦

ಸಿದ್ಧತೆಗೆ ಜಿಲ್ಲಾ ಘಟಕಗಳಿಗೆ ರಾಜ್ಯ ಉಸ್ತುವಾರಿ ವೇಣುಗೋಪಾಲ್ ಸೂಚನೆ

ಹೋರಾಟದ ಕಿಡಿಯಿಂದ ಹುಟ್ಟಿದ ಸ್ಥಳೀಯ ಪತ್ರಿಕೆ

'ಸುದ್ದಿ ಬಿಡುಗಡೆ' ಆರಂಭವಾದ ಬಗೆಯನ್ನು ಬಿಚ್ಚಿಟ್ಟ ಸಂಪಾದಕ ಡಾ.ಯು.ಪಿ.ಶಿವಾನಂದ

ಮೈಸೂರು,ಡಿ.೭- ವೈದ್ಯರೊಬ್ಬರು ಮಲಮಿಶ್ರಿತ ನೀರು ಪೂರೈಕೆಯಾಗುತ್ತಿದೆ ಎಂಬುದನ್ನು ಜನರ ಗಮನಕ್ಕೆ ತಂದಾಗ ಪುರಸಭೆಯವರು ಅವರ ವಿರುದ್ಧವೇ ಮೊಕದ್ದಮೆ ದಾಖಲಿಸಿದರು...

ಇನ್ನೊಮ್ಮೆ ತಾಲ್ಲೂಕು ಮಟ್ಟದಲ್ಲಿ ಭ್ರಷ್ಟಾಚಾರಿ ಯಾರು? ಎಂಬ ಬಗ್ಗೆ ಅದೇ ವೈದ್ಯರು ಸಾರ್ವಜನಿಕರಿಂದ ಮತದಾನ ನಡೆಸಿದಾಗ ಭದ್ರತೆಯೊದಗಿಸಿದ್ದ ಸಬ್ ಇನ್‌ಸ್ಪೆಕ್ಟರ್ ವಿರುದ್ಧವೇ ಜನಾಭಿಪ್ರಾಯ ವ್ಯಕ್ತವಾಗಿತ್ತು...

ಇಂತಹ ಇನ್ನೂ ಕೆಲ ಘಟನೆಗಳ ಪರಿಣಾಮವಾಗಿ ಆ ವೈದ್ಯ ಕೊನೆಗೆ ಸ್ಥಳೀಯ ದಿನಪತ್ರಿಕೆಯನ್ನೇ ಆರಂಭಿಸಿದರು!

ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ವಿಜ್ಞಾನ ಭವನದಲ್ಲಿ 'ಆಂದೋಲನ' ದಿನಪತ್ರಿಕೆ ಸಂಸ್ಥಾಪಕ ಸಂಪಾದಕ ರಾಜಶೇಖರ ಕೋಟಿ ಅವರ ಸ್ಮರಣಾರ್ಥ ಗುರುವಾರ ಆಯೋಜಿಸಿದ್ದ 'ಸಾಮಾಜಿಕ ಜಾಲತಾಣಗಳು ಸಣ್ಣ ಪತ್ರಿಕೆಗಳ ಮೇಲೆ ಉಂಟು ಮಾಡಿರುವ ಪರಿಣಾಮ-ಸವಾಲುಗಳು' ವಿಚಾರ ಮಂಡನೆ ಮಾಡಿದ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ 'ಸುದ್ದಿ ಬಿಡುಗಡೆ' ದಿನಪತ್ರಿಕೆ ಸಂಪಾದಕ ಡಾ.ಯು.ಪಿ.ಶಿವಾನಂದ ಅವರು ತಮ್ಮ ಪತ್ರಿಕಾ ಜೀವನದ ಒಳಗು-ಹೊರಗನ್ನು ಈ ಬಗೆಯಲ್ಲಿ ಬಿಚ್ಚಿಟ್ಟರು.

⏭ ೧೦

ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ 'ಆಂದೋಲನ' ದಿನಪತ್ರಿಕೆ ಸಂಸ್ಥಾಪಕ ಸಂಪಾದಕ ರಾಜಶೇಖರ ಕೋಟಿ ಅವರ ಸ್ಮರಣಾರ್ಥ ಗುರುವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಕೋಟಿ ಅವರ ಭಾವಚಿತ್ರಕ್ಕೆ ಹಿರಿಯ ಪತ್ರಕರ್ತರಾದ ರವಿ ಹೆಗಡೆ, ಡಾ.ಯು.ಪಿ.ಶಿವಾನಂದ, ಸಿ.ಕೆ.ಮಹೇಂದ್ರ, ಎಂ. ಸಿದ್ದರಾಜು, ಕೆ.ಶಿವಕುಮಾರ್, ರವಿ ಕೋಟಿ, ಆರ್. ರಾಜು ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಶಿಕ್ಷಕರ ಊಟದ ಡಬ್ಬಿಗೆ ಕ್ರಿಮಿನಾಶಕ: ಪಲ್ಯ ತಿಂದು ಅಸ್ವಸ್ಥ ವಿದ್ಯಾರ್ಥಿನಿ ಆಸ್ಪತ್ರೆಗೆ

ಹನಗೋಡು,ಡಿ.೭- ಶಿಕ್ಷಕರ ಊಟದ ಬಾಕ್ಸ್‌ಗೆ ಕಿಡಿಗೇಡಿಗಳು ಕ್ರಿಮಿನಾಶಕ ಬೆರೆಸಿ ಕೊಲೆಯತ್ನ ನಡೆಸಿದ ಘಟನೆ ಗುರುವಾರ ಹನಗೋಡು ಸಮೀಪದ ಶಾಲೆಯೊಂದರಲ್ಲಿ ನಡೆದಿದೆ. ಈ ಆಹಾರದಲ್ಲಿ ಸ್ವಲ್ಪ ಭಾಗ ಸೇವಿಸಿದ ವಿದ್ಯಾರ್ಥಿನಿಯೊಬ್ಬಳು ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾಳೆ.

ಶಿಕ್ಷಕ ಸೀತಾರಾಮು

ಹುಣಸೂರು ತಾಲ್ಲೂಕಿನ ನೇರಳಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೇಗತ್ತೂರು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಪಾರ್ಶ್ವವಾಯು ಪೀಡಿತ ಶಿಕ್ಷಕ ಸೀತಾರಾಮು ಅವರ ಊಟದ ಡಬ್ಬಿಗೇ ಕ್ರಿಮಿನಾಶಕ ಬೆರೆಸಲಾಗಿತ್ತು. ಆ ವಿಚಾರ ತಿಳಿಯದ ವಿದ್ಯಾರ್ಥಿನಿ ಸಿಂಚನಾ ಡಬ್ಬಿಯಲ್ಲಿದ್ದ ಪಲ್ಯವನ್ನು ಸ್ವಲ್ಪ ಸೇವಿಸಿ ಅಸ್ವಸ್ಥಳಾದಳು. ಸದ್ಯ ಆಕೆ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾಳೆ.

ಘಟನೆ ವಿವರ: ನೇಗತ್ತೂರು ಗ್ರಾಮದಲ್ಲಿ ಜಾಗದ ಕೊರತೆಯಿಂದ ಶಾಲಾ ಕಟ್ಟಡಗಳು ೨ ಕಡೆ ಪ್ರತ್ಯೇಕವಾಗಿವೆ. ಹಳೆ ಕಟ್ಟಡದಲ್ಲಿ ಪಾಠ ಪ್ರವಚನಗಳು ನಡೆಯುತ್ತದೆ. ೨೦೦ ಮೀಟರ್ ದೂರದಲ್ಲಿ ಹೊಸ ಶಾಲಾ ಕಟ್ಟಡ ಹಾಗೂ ಅಕ್ಷರ ದಾಸೋಹ ಕಟ್ಟಡ ನಿರ್ಮಿಸಲಾಗಿದೆ.

⏭ ೧೦

- ● ನೇಗತ್ತೂರು ಗ್ರಾಮದ ಕಿ.ಪ್ರಾ.ಶಾಲೆಯಲ್ಲಿ ಘಟನೆ
- ● ಕಿಡಿಗೇಡಿಗಳ ಕೃತ್ಯ ಶಂಕೆ; ದಾಖಲಾಗದ ದೂರು

ಸಚಿವ ಹೆಗಡೆ ವಿರುದ್ಧ ಎಫ್‌ಐಆರ್

ಮೈಸೂರು,ಡಿ.೭- ಕೇಂದ್ರ ಸಚಿವ ಅನಂತಕುಮಾರ್ ಹೆಗಡೆ ಬೆಳಗಾವಿಯ ಕಿತ್ತೂರಿನಲ್ಲಿ ನ.೧೭ರಂದು ನಡೆದ ಬಿಜೆಪಿ ಪರಿವರ್ತನಾ ರ್‍ಯಾಲಿಯಲ್ಲಿ ತಮ್ಮ ಭಾಷಣದಲ್ಲಿ ಸಿದ್ದರಾಮಯ್ಯ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಅಸಾಂವಿಧಾನಿಕ ಪದಗಳನ್ನು ಬಳಸಿ ಸಾಂವಿಧಾನಿಕ ಸ್ಥಾನವಾದ ಮುಖ್ಯಮಂತ್ರಿ ಹುದ್ದೆಯನ್ನು ಅಪಮಾನಿಸಿದ್ದರು. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯಿಂದ ಎಫ್‌ಐಆರ್ ದಾಖಲಿಸಲಾಗಿದ್ದು, ಸಚಿವರನ್ನು ಕೂಡಲೇ ಬಂಧಿಸಬೇಕು ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಬೆಳಗಾವಿಯಲ್ಲಿ ನಡೆದ ಬಿಜೆಪಿ ರ್‍ಯಾಲಿಯಲ್ಲಿ ಅನಂತಕುಮಾರ್ ಹೆಗಡೆ ಅವರು 'ಓಟು ಮತ್ತು ಸೀಟಿಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೊಬ್ಬರ ಬೂಟು ನೆಕ್ಕಲೂ ಹಿಂಜರಿಯುವುದಿಲ್ಲ' ಎಂಬ ಹೇಳಿದ್ದಾರೆ. ಮುಖ್ಯಮಂತ್ರಿಗಳ ವಿರುದ್ಧ ಅವಾಚ್ಯ ಶಬ್ದಗಳನ್ನು ಬಳಸಿ ದೇಶದ್ರೋಹಿ ಹೇಳಿಕೆಗಳನ್ನು ನೀಡಿದ್ದಾರೆ. ಹಾಗಾಗಿ ಸಚಿವರ ವಿರುದ್ಧ ದೇವರಾಜ ಪೊಲೀಸ್ ಠಾಣೆಗೆ ದೂರು ದಾಖಲಿಸಿದಾಗ ಎಫ್‌ಐಆರ್ ದಾಖಲಿಸದೆ ಕೇವಲ ಹಿಂಬರಹ ನೀಡಿದ್ದರು.

⏭ ೧೦

ಬೆಳಗಾವಿಯಲ್ಲಿ ಸಿಎಂಗೆ ನಿಂದನೆ ಆರೋಪ: ಕಾಂಗ್ರೆಸ್ ಮೈಸೂರು ಘಟಕದಿಂದ ದೂರು

- ■ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಸುದ್ದಿಗೋಷ್ಠಿ
- ■ ಕಲಂ ೧೫೩(ಎ), ೫೦೪ರಡಿ ದೇವರಾಜ ಠಾಣೆಯಲ್ಲಿ ಪ್ರಕರಣ
- ■ ಸಚಿವರ ವಿರುದ್ಧ ತಕ್ಷಣ ಕ್ರಮಕ್ಕೆ ಪೊಲೀಸ್ ಇಲಾಖೆಗೆ ಒತ್ತಾಯ

ವರ್ಗೀಕೃತ ಜಾಹೀರಾತು

ಪುಟ- ೧೨, ೫

ಮೈಸೂರು NECC

ಕೋಳಿ ಮೊಟ್ಟೆ ಧಾರಣೆ

100ಕ್ಕೆ Rs. 435

ದೂರವಾಣಿ: 2425156

22 ಕ್ಯಾರೆಟ್ ಚಿನ್ನದ ದರ

ತೊಳಸಿ

₹2715 1 ಗ್ರಾಂಗೆ

ಹಿಂದಿನ ದಿನದ ದರ

THOLASI JEWELS

ಅಶೋಕ ರೋಡ್, ಮೈಸೂರು

Ph: 2521926, 2441926